ಶ್ರೀ ಜೆ.ಹೆಚ್. ಪಟೇಲ್ (ವಾಣಿಜ್ಯ, ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು).—

ಅ) ೧೯೮೪ ರಿಂದ ೧೯೮೭ ರವರೆಗೆ ಕೈಮಗ್ಗದ ನೇಕಾರ ಸಹಕಾರ ಸಂಘಗಳು ನಬಾರ್ಡ್ ಸಂಸ್ಥೆಯಿಂದ ಪಡೆದಿರುವ ದಾಡಿಯುವ ಬಂಡವಾಳದ ಸಾಲಗಳ ವಿವರ ಈ ರೀತಿ ಇದೆ.

(ಲಕ್ಷ ರೂ.ಗಳಲ್ಲಿ)

೧೯೮೩-೮೪ ರಲ್ಲಿ ೫೪ ಸಂಘಗಳು ರೂ. ೨೨೦-೮೦
೧೯೮೪-೮೫ ರಲ್ಲಿ ೨೬ ಸಂಘಗಳು ರೂ. ೧೩೭-೮೦
೧೯೮೫-೮೬ ರಲ್ಲಿ ೩೮ ಸಂಘಗಳು ರೂ. ೨೩೦-೪೫
೧೯೮೬-೮೭ ರಲ್ಲಿ ೨೫ ಸಂಘಗಳು ರೂ. ೧೫೩-೪೬

ಆ) ಬಂದಿದೆ.

ಇ) ಸಂಬಂಧಪಟ್ಟ ಸಹಕಾರ ಸಂಘಗಳ ಆದಳಿತ ವರ್ಗಗಳು-

೧) ಸಹಕಾರ ಸಂಘಗಳ ಪುನರ್ ಸಂಘಟನೆ ಮತ್ತು ಪುನಶ್ಚೇತನ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.

೨) ಸಾಲ ಪಡೆಯುವ ಮಿತಿಯನ್ನು ಹೆಚ್ಚಿಸಲು ಷೇರು ಬಂಡವಾಳವನ್ನು ಒದಗಿಸುವುದು.

೩) ನಬಾರ್ಡ್‌ನಿಂದ ಬೇಕಾದ ವಿವಿಧ ಸಹಾಯವನ್ನು ಕೇಂದ್ರ ಸಹಕಾರ ಬ್ಯಾಂಕುಗಳಿಂದ ಒದಗಿಸಲು ಏರ್ಪಡಿಸುವುದು.

ತುಂಗಭದ್ರಾ ಫೈಬರ್ಸ್ ಲಿಮಿಟೆಡ್ ಕೈಗಾರಿಕೆಯ ಬಗ್ಗೆ

೧೦೪ (೩೫೮) ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ವಾಣಿಜ್ಯ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಯಚೂರು ಜಿಲ್ಲೆಯ ತುಂಗಭದ್ರಾ ಫೈಬರ್ಸ್ ಕೈಗಾರಿಕೆಯು ಎಷ್ಟು ದಿನಗಳಿಂದ ಉತ್ಪಾದನೆಯನ್ನು ನಿಲ್ಲಿಸಿದೆ ಹಾಗೂ ಕಾರಣಗಳೇನು ?

ಆ) ಉತ್ಪಾದನೆಯನ್ನು ಪ್ರಾರಂಭಿಸುವ ಸಲುವಾಗಿ ಸರ್ಕಾರದಿಂದ ಏನಾದರೂ ಪ್ರಯತ್ನ ನಡೆದಿದೆಯೇ ?

ಇ) ಹಾಗಿದ್ದಲ್ಲಿ, ಯಾವಾಗಿನಿಂದ ಆ ಕೈಗಾರಿಕೆಯು ಉತ್ಪಾದನೆಯನ್ನು ಪ್ರಾರಂಭಿಸುವುದು?

ಶ್ರೀ ಜೆ.ಹೆಚ್. ಪಟೇಲ್ (ವಾಣಿಜ್ಯ, ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ಜನವರಿ ೧೯೮೫ ರಿಂದ ವಿದ್ಯುತ್ ಅಭಾವ, ಹಣಕಾಸಿನ ಅಡಚಣೆ ಇವುಗಳಿಂದಾದ ನಷ್ಟಗಳು ಇವು ಮುಚ್ಚುವುದಕ್ಕೆ ಕಾರಣಗಳಾಗಿವೆ.

ಆ) ಹೌದು. ಹಣಕಾಸು ಸಂಸ್ಥೆಗಳೊಡನೆ ಈ ಬಗ್ಗೆ ಚರ್ಚಿಸಲಾಗುತ್ತಿದೆ.

ಇ) ಕಾರ್ಖಾನೆಯನ್ನು ಸಾಧ್ಯವಾದಷ್ಟು ಬೇಗ ತೆರೆಯಲು ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ರಾಜ್ಯದಲ್ಲಿ ವಿದ್ಯುದ್ದೀಕರಣ ಆಗದೇ ಇರುವ ಗ್ರಾಮಗಳು

೧೦೬ (೧೦೮) ಶ್ರೀ ಕೆ.ಹೆಚ್. ಪಾಟೀಲ್ (ಗದಗ).—ಮಾನ್ಯ ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ಇಲ್ಲಿಯವರೆಗೆ ವಿದ್ಯುದ್ದೀಕರಣವಾಗದೇ ಇರುವ ಒಟ್ಟು ಹಳ್ಳಿಗಳ ಸಂಖ್ಯೆ ಎಷ್ಟು ?

ಆ) ಸರ್ಕಾರವು ಇವುಗಳನ್ನು ವಿದ್ಯುದ್ದೀಕರಣಗೊಳಿಸಲು ಕೈಗೊಂಡ ಕ್ರಮಗಳೇನು ?

ಶ್ರೀ ಜೆ.ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು).—

ಅ) ೧೫೯೬ ಗ್ರಾಮಗಳು

ಆ) ೧೯೮೮-೮೯ನೇ ಸಾಲಿನ ಕೊನೆಯ ಹೊತ್ತಿಗೆ ಎಲ್ಲ ಹಳ್ಳಿಗಳನ್ನು ವಿದ್ಯುದ್ದೀಕರಣಗೊಳಿಸಲು ಯೋಚಿಸಲಾಗಿದೆ.

ಅಧ್ಯಕ್ಷರು.—ಪ್ರಶ್ನೋತ್ತರಗಳನ್ನು ಮುಂದಿಸಲಾಯಿತು.

ಹಕ್ಕುಚ್ಯುತಿ ನಿರ್ಣಯ ಮುಂದಿನೆಗೆ ಅನುಮತಿ ಕೋರಿಕೆ

ನಗರಾಭಿವೃದ್ಧಿ ಸಚಿವರು ನೀಡಿದ ತಪ್ಪು ಹೇಳಿಕೆ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ನಾನು ವಿಧಾನಸಭೆಯ ನಿಯಮಾವಳಿಯ ೧೯೩ರ ಪ್ರಕಾರ ನಾನು ನಗರಾಭಿವೃದ್ಧಿ ಸಚಿವರ ಮೇಲೆ ಪ್ರಿವಿಲೇಜ್ ಮೋಷನ್ ತರುವುದಕ್ಕೆ ತಮಗೆ ಸೂಚನೆಯನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು.—ನೀವು ಲಾ ಮಿನಿಸ್ಟರ್ ಮೇಲೆ ಕೊಟ್ಟಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಗರಾಭಿವೃದ್ಧಿ ಸಚಿವರ ಮೇಲೆ ಹಕ್ಕು ಬಾಧ್ಯತಾಚ್ಯುತಿ ಸೂಚನೆಯನ್ನು ನಿಯಮ ೧೯೩ರ ಪ್ರಕಾರ ತಂದಿರುತ್ತೇನೆ.

ಅಧ್ಯಕ್ಷರು.—ಅದನ್ನು ಆಮೇಲೆ ತೆಗೆದುಕೊಳ್ಳುತ್ತೇನೆ ನಿಮಗೆ ಅವಕಾಶ ಕೊಡುತ್ತೇನೆ. ಈಗ ತಾವು ಕುಳಿತುಕೊಳ್ಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಾವು ನನಗೆ ಅವಕಾಶ ಮಾಡಿಕೊಡಿ. ನಾನು ಇದರ ಬಗ್ಗೆ ಮಾತನಾಡಬೇಕು.

ಅಧ್ಯಕ್ಷರು.—ಆಮೇಲೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಿಯಮ ೧೯೩ರ ಪ್ರಕಾರ ನಾನು ಸ್ಟೇಟ್‌ಮೆಂಟ್ ಮಾಡುವುದಕ್ಕೆ ಅವಕಾಶ ಇದೆ. ಮಾನ್ಯ ಲಕ್ಷ್ಮೀಸಾಗರರವರು ನಿನ್ನೆ ಸಭೆಯಲ್ಲಿ ಕೊಟ್ಟಂತ ಹೇಳಿಕೆ ತಪ್ಪಾಗಿದೆ.

ಅಧ್ಯಕ್ಷರು.—ಅವಕಾಶ ಕೊಡುತ್ತೇನೆ, ತಾವು ಈಗ ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಡಿಸ್ಕಷನ್‌ಗೆ ಬೇಕಾದರೆ ನಾಳೆ ಅವಕಾಶ ಕೊಡಿ. ನಿಯಮ ೧೯೩ರ ಪ್ರಕಾರ ನನಗೆ ಮಾತನಾಡುವುದಕ್ಕೆ ಅವಕಾಶ ಇದೆ.

ನನ್ನ ಅರಿಕೆ ತಮಗೆ ಸರಿಯಾಗಿಲ್ಲ ಎಂದು ಅನಿಸಿದರೆ, ತಾವು ಹೇಳಬಹುದು.....ತಮಗೆ ಆ ವಿಷಯದ ಬಗ್ಗೆ ತಿಳಿಸಿ ಹೇಳುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.....ಒಂದು ನಿಮಿಷದ ಅವಕಾಶ ಮಾಡಿಕೊಡಬೇಕು. ನನ್ನ ಪ್ರಶ್ನೆ ಏನೆಂದರೆ, ಇದರಲ್ಲಿ ಫ್ರೈಮಾಫೇಸಿ ಕೇಸ್ ಇದು ಇದೆಯೋ ಇಲ್ಲವೋ ಎಂದು ತಾವು ಪರಿಶೀಲನೆ ಮಾಡಿ.....

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರೇ, ತಾವು ಇವೊತ್ತು ಬೆಳಿಗ್ಗೆ ೧೦ ಗಂಟೆಗೆ ಈ ವಿಷಯವನ್ನು ಕೊಟ್ಟಿದ್ದೀರಿ. ಮುಂದೆ ತಮಗೆ ಅವಕಾಶವನ್ನು ಪರಿಶೀಲನೆ ಮಾಡಿ ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಿಯಮಾವಳಿಯಲ್ಲಿ ಸದನ ಸೇರುವುದಕ್ಕೆ ಮುಂಚೆ ಸೂಚನೆಯನ್ನು ಕೊಟ್ಟರೆ ಸಾಕು ಎಂದು ಇದೆ. ನಾನು ವಿಷಯದ ಮಹತ್ವವನ್ನು ಈಗ ಹೇಳುತ್ತೇನೆ..... ನಿನ್ನೆಯ ದಿವಸ ಮಾನ್ಯ ನಗರಾಭಿವೃದ್ಧಿ ಸಚಿವರು, ಬೆಂಗಳೂರು ನಗರ ಕಾರ್ಪೊರೇಷನ್‌ರವರು ವಿಧಿಸಿದ ಆಸ್ತಿ ತೆರಿಗೆ ಪರಿಷ್ಕರಣದ ಬಗ್ಗೆ ಒಂದು ಹೇಳಿಕೆಯನ್ನು ಕೊಡುತ್ತಾ, ಈ ಸದನವನ್ನು ತಪ್ಪು ದಾರಿಗೆ ಎಳೆದು ಅಗತ್ಯ ಮಾಹಿತಿಗಳನ್ನು ಉದ್ದೇಶಪೂರ್ವಕವಾಗಿ ಹೇಳಿದ್ದು ಆ ಸ್ಟೇಟ್‌ಮೆಂಟ್‌ನಲ್ಲಿ ಕಾಣುತ್ತಾ ಇದೆ. ಅದರಲ್ಲಿ "ಈ ವಿಷಯದಲ್ಲಿ ಬೆಂಗಳೂರು ಮಹಾನಗರಪಾಲಿಕೆಯ ಅಧಿಕಾರಿಗಳು ವಾರ್ಷಿಕ ಮೌಲ್ಯ ಪರಿಷ್ಕರಿಸುವ ಬಗ್ಗೆ ಈ ಪರೆಗೆ ಮಾಡಿದ ಕೆಲಸಕಾರ್ಯಗಳು ಇಂತಿವೆ. ಸಹಾಯಕ ಕಂದಾಯ ಅಧಿಕಾರಿ ವರದಿ ಮೇಲೆ ಮಾಡಿದ ಅಜ್ಞೆಗಳ ಸಂಖ್ಯೆ ೧,೮೬,೯೮೪. ಆಸ್ತಿವಾರ್ಷಿಕ ಮೌಲ್ಯ